ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ:ಸಿ3(1)ಪ್ರಾ.ಶಿ.ಇತರೆ./19-20 ದಿನಾಂಕ:24.04.2019

**::ಜ್ಞಾಪನ::**

ವಿಷಯ:-2015-16ರ ನೇಮಕಾತಿಗಳಲ್ಲಿ ಆಯ್ಕೆಯಾಗಿ ಹಾಜರಾಗಿರುವ ಶಿಕ್ಷಕರ ಮೂಲ ಪ್ರಮಾಣ ಪತ್ರಗಳನ್ನು ಹಿಂದಿರುಗಿಸದೇ ಇರುವ ಬಗ್ಗೆ ಶಿಕ್ಷಕರ ಮನವಿ ಬಗ್ಗೆ

*****************

ವಿಷಯದನ್ವಯ ರಾಜ್ಯದ ಹಲವು ತಾಲ್ಲೂಕುಗಳಲ್ಲಿ ಈವರೆವಿಗೂ 2015-16ನೇ ಸಾಲಿನ ನೇಮಕಾತಿಗಳಲ್ಲಿ ಆಯ್ಕೆಯಾಗಿ ಹಾಜರಾಗಿರುವ ಶಿಕ್ಷಕರ ಮೂಲ ಅಂಕಪಟ್ಟಿ ಮತ್ತು ಇತರೆ ಪ್ರಮಾಣ ಪತ್ರಗಳನ್ನು ಸರಿಸುಮಾರು 03 ವರ್ಷಗಳ ನಂತರವು ಹಿಂದಿರುಗಿಸದೇ ಶಿಕ್ಷಕರಿಗೆ ತೊಂದರೆಯಾಗಿದೆ ಎಂಬುದಾಗಿ ಹಲವು ದೂರವಾಣಿ ಕರೆಗಳು ಹಾಗೂ ಮನವಿಗಳು ಸ್ವೀಕೃತವಾಗಿವೆ.

ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗಿರುವ ಪ್ರಕರಣಗಳಲ್ಲಿ ಎಲ್ಲಾ ದಾಖಲೆಗಳನ್ನು ವಿಳಂಬವಿಲ್ಲದಂತೆ ಶಿಕ್ಷಕರಿಗೆ ಹಿಂದಿರುಗಿಸತಕ್ಕದ್ದು. ಇನ್ನು, ಖಾಯಂ ಪೂರ್ವ ಸೇವಾವಧಿ ಘೋಷಣೆ ಬಾಕಿ ಇರುವ ಪ್ರಕರಣಗಳಲ್ಲಿ ಅಗತ್ಯವಿರುವ ದಾಖಲೆಗಳನ್ನು ಪರಿಶೀಲಿಸಿ ತುರ್ತಾಗಿ ಕ್ರಮಗಳನ್ನು ಕೈಗೊಂಡು ನಿಯಮಾನುಸಾರ ಅಂತಹ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಸೇವಾ ಪುಸ್ತಕಕ್ಕೆ ಲಗತ್ತಿಸಿ ಆ ಎಲ್ಲಾ ಮೂಲ ಪ್ರಮಾಣ ಪತ್ರಗಳನ್ನು ಹಿಂದಿರುಗಿಸಲು ಸೂಚಿಸಿದೆ.

ಶಿಕ್ಷಕರಿಗೆ ಸಂಬಂಧಪಟ್ಟ ಅಂಕ ಪಟ್ಟಿಗಳು ಮತ್ತು ಇತರೆ ಪ್ರಮಾಣ ಪತ್ರಗಳನ್ನು ಇಲಾಖೆಯಲ್ಲಿ ಅನಗತ್ಯವಾಗಿ ಇಟ್ಟುಕೊಳ್ಳುವುದು ಸೂಕ್ತವಾಗಿರುವುದಿಲ್ಲ ಮತ್ತು ಶಿಕ್ಷಕರಿಗೆ ಇದರಿಂದ ತೊಂದರೆಯಾಗಬಹುದಾಗಿದೆ. ಈ ಕುರಿತಾದ ದೂರುಗಳು ಸ್ವೀಕೃತವಾದಲ್ಲಿ ಅಂತಹ ಕ್ಷೇತ್ರಶಿಕ್ಷಣಾಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಯತಕ್ಕದ್ದು. ಈ ಬಗ್ಗೆ ಆಯಾ ಜಿಲ್ಲಾ ಉಪನಿರ್ದೇಶಕರುಗಳು ಸಹ ನಿಗಾ ಕ್ರಮ ಕೈಗೊಳ್ಳಲು ಸೂಚಿಸಿದೆ.

(ಎಸ್ .ಜಯಕುಮಾರ)
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಗೆ

1. ರಾಜ್ಯದ ಎಲ್ಲಾ ಉಪನಿದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರ ಮುಖಾಂತರ) ಅಗತ್ಯ ಕ್ರಮಕ್ಕಾಗಿ